**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *19.09.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀಮತಿ ಜ್ಯೋತಿ ವಕೀಲರಿಂದ</u>**

1.ನಾನು ಕಾರ್ಪೋರೇಶನ್ ನ ಹೆಬ್ಬಾಳು ಬಸವನಗುಡಿ ಕಛೇರಿಯಲ್ಲಿ ಕೆಲಸ ಮಾಡುತ್ತೇನೆ. ನಮ್ಮ ಕಛೇರಿಯಿಂದ ಪೋಲೀಸ್ ಠಾಣೆ ಅರ್ಧ ಕಿ.ಮಿ ದೂರದಲ್ಲಿದೆ. ಪಂಚನಾಮೆಗೆ ಬರುವಂತೆ ಪಂಚ ಅಧಿಕಾರಿ ನಮ್ಮ ವಲಯ ಕಛೇರಿಯ ಆಯುಕ್ತರಿಗೆ ಪತ್ರ ಕಳಿಸಿದ್ದರು. ಆಗ ವಲಯ ಆಯುಕ್ತರು ನನಗೆ ಮತ್ತು ಪ್ರಾಸಾ 3 ರವರಿಗೆ ಮಹಜರಿಗೆ ಹೋಗುವಂತೆ ಮೌಖಿಕವಾಗಿ ಹೇಳಿದ್ದರು. ಮದ್ಯಾಹ್ನ 30.30 ರಿಂದ 4 ಗಂಟೆಗೆ ಆ ರೀತಿ ಹೇಳಿದ್ದರು. ಆ ಕಾಲಕ್ಕೆ ನಮ್ಮ ಕಛೇರಿಯ ಮೂವ್ಮೆಂಟ್ ರಜಿಸ್ಟರ್ ನಲ್ಲಿ ನಾನು ನಮೂದು ಮಾಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ. ಆ ಕಾಲಕ್ಕೆ ಮೂವ್ಮೆಂಟ್ ರಿಜಿಸ್ಟರ್ ಇಟ್ಟಿರಲಿಲ್ಲ. ಆ ದಿನ ಮೂಮೆಂಟ್ ರಿಜಿಸ್ಟರ್ ಇದ್ದರೂ ಸಹ ಸುಳ್ಳ ಸಾಕ್ಷಿ ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಮಹಜರು ಕಾಲಕ್ಕೆ ಸಂಜೆ 04.30 ಕ್ಕೆ ನಾನು ಕಛೇರಿಯಿಂದ ಹೊರಟು 05.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದೆ. ಆಗ ಪೋಲಿಸ್ ಠಾಣೆಯಲ್ಲಿ ತನಿಖಾಧಿಕಾರಿಗಳು ಇದ್ದರು. ಅವರ ಹೆಸರು ಗೊತ್ತಿಲ್ಲ. ಆಗ ತನಿಖಾಧಿಕಾರಿ ಕೊಲೆ ಆದ ಬಗ್ಗೆ ತಿಳಿಸಿ ನನ್ನನ್ನು ಮತ್ತು ಚಾಸಾ 3 ರವರನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ನಮ್ಮನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಹೋಗಿದ್ದರು. ಆ ವಾಹನ ಸಂಖ್ಯೆ ನೆನಪಿಲ್ಲ. ಠಾಣೆಯಿಂದ 05.45 ಕ್ಕೆ ಹೊರಟಿದ್ದೆವು. ಸಂಜೆ 06 ರಿಂದ 06.15 ಕ್ಕೆ ಆ ಸ್ಥಳಕ್ಕೆ ಹೋಗಿದ್ದೆವು. ಹೆಬ್ಬಾಳು ಮುಖ್ಯ ರಸ್ತೆಯಿಂದ ಕುಂಬಾರುಕೊಪ್ಪಲು ಮಾರ್ಗವಾಗಿ ಆ ಸ್ಥಳಕ್ಕೆ ಹೋಗಿದ್ದೆವು. ಘಟನೆ ಸ್ಥಳದಿಂದ

10 ಮೀ ದೂರದಲ್ಲಿ ಅದೇ ರಸ್ತೆಯಲ್ಲಿ ವಾಹನವನ್ನು ನಿಲ್ಲಿಸಿದ್ದರು. ತನಿಖಾಧಿಕಾರಿಯವರು ಹೇಳಿದ ಸ್ಥಳದಲ್ಲಿ ಆ ವಾಹನವನ್ನು ನಿಲ್ಲಿಸಿದ್ದರು. ಆ ವಾಹನ ನಿಲ್ಲಿಸಿದ ಸ್ದಳದಲ್ಲಿ ಯಾರ ಮನೆ ಇದೆ ಎಂದು ನನಗೆ ಗೊತ್ತಿಲ್ಲ. ಆ ಸ್ದಳದಲ್ಲಿ 20 ಅಡಿ ಅಗಲ ಟಾರು ರಸ್ತೆಯಿದೆ. ವಾಹನ ನಿಲ್ಲಿಸಿದ ಸ್ದಳದ ಅಕ್ಕ ಪಕ್ಕದಲ್ಲಿ ಮನೆಗಳು ಇವೆ ಮತ್ತು ಹಿಂದೆ ಮುಂದೆ ರಸ್ತೆ ಇದೆ. ಕೃತ್ಯ ನಡೆದ ಸ್ಥಳ ಮನೆ ಸಂಖ್ಯೆ 180 ಇದೆ. ಆ ಮನೆ ಆದಿಶಕ್ತಿ ಮಾರಮ್ಮ ದೇವಸ್ಥಾನದ ರಸ್ತೆಯಲ್ಲಿ ಇದೆ. ನಾನು ಹೋದಾಗ ಅಲ್ಲಿ ಎಫ್ ಎಸ್ ಎಲ್ ಅಧಿಕಾರಿಗಳು ಮತ್ತ ಬೆರಳಚ್ಚು ಅಧಿಕಾರಿಗಳು ಆ ಸ್ಥಳದಲ್ಲಿ ಇದ್ದರು. ನಾವು ಹೋದ ನಂತರ ಆ ಸ್ದಳವನ್ನು ತನಿಖಾಧಿಕಾರಿಯು ಎಫ್ ಎಸ್ ಎಲ್ ಅಧಿಕಾರಿಗಳಿಗೆ ಮತ್ತು ಬೆರಳಚ್ಚು ತಜ್ಞರಿಗೆ ತೋರಿಸಿದ್ದೆವು. ಆ ಚಾಕುವನ್ನು ತನಿಖಾಧಿಕಾರಿಯವರು ತೋರಿಸಿದ್ದರು. ಆದನ್ನು ಎಫ್ ಎಸ್ ಎಲ್ ಅಧಿಕಾರಿಗಳು ಪರಿಶೀಲಿಸಿದ್ದರು. ಮಹಜರನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿದ್ದರು. ಅದು ಅಂದಾಜು 5 ಮೇಜು ಇದೆ. ಮಹಜರನ್ನು ಪೋಲೀಸರೇ ಬರೆದಿದ್ದರು. ತನಿಖಾಧಿಕಾರಿಗಳು ಅದನ್ನು ಬರೆಯಲು ಹೇಳಿದ್ದರು. ಅದನ್ನು ರಸ್ತೆಯ ಬದಿಯಲ್ಲಿಯೇ ಬರೆದಿದ್ದರು. ಮಹಜರಿಗೆ ಮೊದಲು ನಾನು ಸಹಿ ಮಾಡಿದ್ದೆ ನಂತರ ಚಾಸಾ 3 ಸಹಿ ಮಾಡಿದ್ದರು. ನನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ. ಆ ದಿನ ನಾನು ಆ ಸ್ದಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ಆ ದಿನ ತಿಳಿದುಕೊಂಡಿದ್ದೆ, ಈಗ ಪೂರ್ತಿಯಾಗಿ ಹೇಳಲು ಆಗುವುದಿಲ್ಲ. ಘಟನೆಯ ಸ್ದಳದ ಪೂರ್ವ ಪಶ್ಚಿಮಕ್ಕೆ ಏನೇನು ಇದೆ ಎಂದು ಈಗ ಹೇಳಲು ಆಗುವುದಿಲ್ಲ. 05.45 ರಿಂದ 06.15 ರ ವರೆಗೆ ಮಹಜರು ಮಾಡಿದ್ದರು.

ಪೊಲೀಸ್ ಠಾಣೆಯಲ್ಲಿ ಮಹಜರಿಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಪೋಟೋಗಳನ್ನು ಸಹ ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಚಾಕು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***